ರಸ್ತೆ ಬದಿಯಲ್ಲಿನ ಮರಗಳನ್ನು ಕಡಿಯುವುದಕ್ಕೆ ಜಿಲ್ಲಾ ಅರಣ್ಯಾಧಿಕಾರಿ ಅನುಮತಿ ಕೊಡುತ್ತಾ ಇಲ್ಲ. ಈ ಬಗ್ಗೆ ಸೂಕ್ತ ತನಿಖೆ ಮಾಡಿ ಅರಣ್ಯ ಅಧಿಕಾರಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಅರಣ್ಯ ಇಲಾಖೆಯ ಅಧಿಕಾರಿಗಳ ವಿರೋಧದ ಪ್ರಶ್ನೆ ಮುಖ್ಯವಲ್ಲ. ಕೇಂದ್ರ ಸರ್ಕಾರದ ನಿಯಮದ ಪ್ರಕಾರ ಅಧಿಕಾರಿಗಳು ಅರಣ್ಯವನ್ನು ರಕ್ಷಣೆ ಮಾಡಬೇಕು. ಮಾನ್ಯ ಸದಸ್ಯರು ಹೇಳುವಹಾಗೆ ಕೆಲವರು ಅತಿ ಮಾಡುವುದು ಉಂಟು. ಅಂತಹದ್ದು ಏನಾದರೂ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ವಸಂತ ಬಂಗೇರ.—ಮಾರ್ಗ ಮಧ್ಯದಲ್ಲಿ ಲೈನುಗಳನ್ನು ಹಾಕುವ ವ್ಯವಸ್ಥೆ ಮಾಡಿದ್ದಾರೆ. ಅಲ್ಲೆರುವ ಮರಗಳನ್ನು ಕಡಿಯಲ್ಲಿಕ್ಕೆ ಅರಣ್ಯ ಅಧಿಕಾರಿಗಳು ಅನುಮತಿಯನ್ನು ಕೊಟ್ಟಿಲ್ಲ. ಮೂರು ವರ್ಷಗಳಿಂದ ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಎಂಬ ಹಳ್ಳಿಗೆ ವಿದ್ಯುತ್ ಕೊಡುವುದಕ್ಕೆ ಅವಕಾಶವಾಗಿಲ್ಲ. ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆ. ಅವರ ಬಗ್ಗೆ ಯಾವುದೇ ಕ್ರಮವನ್ನು ಇಷ್ಟರವರೆಗೆ ತೆಗೆದು ಕೊಂಡಿಲ್ಲ.

ಶ್ರೀ ಜೆ. ಎಚ್. ಪಟೇಲ್.—ಆ ಅಧಿಕಾರಿ ಯಾರೆಂಬುದು ಗೊತ್ತಿಲ್ಲ. ಅವರಿಗಿಂತ ಮೇಲ್ಪಟ್ಟ ಅಧಿಕಾರಿಗಳಿಗೆ ಹೇಳಿ ಅವರಿಗೆ ಸರಿಯಾದ ಡೈರೆಕ್ಷನ್ ಕೊಡಿಸುತ್ತೇನೆ.

ದಕ್ಷಿಣ ಕನ್ನಡ ಗಡಿಗಳಿಂದ ಕೇರಳಕ್ಕೆ ಕಳ್ಳ ಸಾಗಾಣಿಕೆಯಾಗಿ ಮರಗಳನ್ನು ಸಾಗಿಸಿರುವ ಬಗ್ಗೆ

೩೧೧. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಗಡಿಗಳಿಂದ ಕೇರಳಕ್ಕೆ ಗಂಧದ ಸಾಗುವಣಿ ಬೀಟಿ ಇಂತಹ ಅರಣ್ಯ ಸಂಪತ್ತು ೧೯೮೪–೮೫ ೧೯೮೫–೮೬ ಡಿಸೆಂಬರ್ ಅಖೈರುವರೆಗೆ ಕಳ್ಳ ಸಾಗಾಣಿಕೆಯಾಗಿ ಹೋದ ಪ್ರಕರಣಗಳೆಷ್ಟು?

ಆ) ಈ ಕುರಿತು ಎಷ್ಟು ದಾವೆಗಳನ್ನು ಹೂಡಲಾಗಿದೆ, ಎಷ್ಟು ಮೊತ್ತದ ಸೊತ್ತು ಸ್ವಾಧೀನವಾಗಿದೆ ಹಾಗೂ ಎಷ್ಟು ಜನರಿಗೆ ದಂಡ ವಿಧಿಸಲಾಗಿದೆ ಮತ್ತು ಎಷ್ಟು ವಾಹನಗಳನ್ನು ಸ್ವಾಧೀನ ಮಾಡಲಾಗಿದೆ ?

ಇ) ಅರಣ್ಯ ಸಂಪತ್ತು ನಾಶವಾಗದಂತೆ ಹಾಗೂ ಕಳ್ಳ ಸಾಗಾಣಿಕೆ ಆಗದಂತೆ ತೆಗೆದುಕೊಂಡ ಹೊಸ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ೧೯೮೪–೮೫ ಮತ್ತು ೧೯೮೫–೮೬ರ ಅಖೈರ್‌ವರೆಗೆ ಮಂಗಳೂರು ಅರಣ್ಯ ವಿಭಾಗದಲ್ಲಿ ಪತ್ತೆ ಹಚ್ಚಲಾದ ಕಳ್ಳಸಾಗಾಣಿಕೆ ಪ್ರಕರಣಗಳ ವಿವರ ಈ ಕೆಳಗಿನಂತಿದೆ.

	೧೯೮೪–೮೫	೧೯೮೫–೮೬
ಗಂಧ	೫	೩
ಬೀಟಿ	೧	–
ಇತರೆ	೮	೭
	೧೪	೧೦

ಒಟ್ಟು ಪ್ರಕರಣಗಳು—೨೪.

ಆ) ೧೯೮೪-೮೫ ಮತ್ತು ೮೫-೮೬ರಲ್ಲಿ ಹೂಡಲಾದ ದಾವೆಗಳು ಈ ಕೆಳಗಿನಂತಿದೆ.—

	೧೯೮೪-೮೫	೧೯೮೫-೮೬
ಗಂಧ	೪	೨
ಬೀಟೆ	–	–
ಇತರೆ	೧	–
	೫	೨

ಹೀಗೆ ಒಟ್ಟು ೭ ದಾವೆ ಹಾಕಲಾಗಿದೆ. ಸ್ವಾಧೀನಪಡಿಸಿಕೊಂಡ ಸ್ವತ್ತಿನ ಕಿಮ್ಮತ್ತು ಈ ರೀತಿ ಇದೆ.

೮೪-೮೫ ರೂ.	೧೬,೯೮೧-೧೩
೮೫-೮೬ ರೂ.	೮,೧೯೪-೨೯
ಒಟ್ಟು ರೂ.	೨೫,೧೭೫-೪೨

೧೯೮೪-೮೫ ಮತ್ತು ೧೯೮೫-೮೬ ರವರೆಗೆ ೧೧ ಜನರಿಗೆ ಶಿಕ್ಷೆ ದಂಡ ವಿಧಿಸಲಾಗಿದೆ.

೧೯೮೪-೮೫ರಲ್ಲಿ ಯಾವ ವಾಹನವನ್ನು ಸ್ವಾಧೀನ ಪಡಿಸಿಕೊಂಡಿಲ್ಲ. ೧೯೮೫-೮೬ರಲ್ಲಿ ಎರಡು ಬಸ್ಸುಗಳನ್ನು ಸ್ವಾಧೀನ ಪಡಿಸಿಕೊಂಡು ಮುಂದಿನ ಕ್ರಮ ಜರುಗಿಸಲಾಗುತ್ತಿದೆ.

ಇ) ಮಂಗಳೂರಿನಲ್ಲಿರುವ ಅರಣ್ಯ ಸಂಚಾರಿ ದಳದ ಸಿಬ್ಬಂದಿ ವರ್ಗದವರಿಗೆ ಅರಣ್ಯ ಸಂಪತ್ತಿನ ಕಳ್ಳಸಾಗಾಟಗಾರರ ಮೇಲೆ ನಿಗಾ ಇಟ್ಟು ಮತ್ತು ಕಳ್ಳಾಟಿಕೆಯಾಗುವಂತ ಪ್ರದೇಶದ ಮೇಲೆ ಮೇಲಿಂದ ಮೇಲೆ ಗಸ್ತು ತಿರುಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಕ್ತ ಎಚ್ಚರಿಕೆ ನೀಡಲಾಗಿದೆ. ಗಡಿ ಪ್ರದೇಶಗಳಲ್ಲಿ ನಡೆಯುವಂತಹ ಅಕ್ರಮ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಅರಣ್ಯ ರಕ್ಷಕ ಇಲಾಖೆಯ ಸಂಚಾರಿ ದಳದ ಎರಡು ಘಟಕಗಳು ಕೆಲಸ ನಿರ್ವಹಿಸುತ್ತಿವೆ.

ದಿನಗೂಲಿ ಆಧಾರದ ಮೇಲೆ ಸ್ಕೌಟಿಂಗ್ ವಾಚರ್‌ಗಳನ್ನು ನೇಮಿಸಲಾಗಿದ್ದು ಅವರು ಇಲಾಖಾ ಸಿಬ್ಬಂದಿಯೊಂದಿಗೆ ಗಡಿ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದಾರೆ. ವೈರ್‌ಲೆಸ್ ಸಲಕರಣೆಗಳನ್ನು ಅಳವಡಿಸಿದ ಹಲವು ಪ್ರಮುಖ ತನಿಖಾ ಠಾಣೆಗಳಿಗೂ ಹಾಗೂ ಅರಣ್ಯ ಸಂಚಾರಿ ದಳದವರಿಗೂ ಒದಗಿಸಲಾಗಿದೆ.

ಶ್ರೀ ಬಿ.ಎಂ. ಇದಿನಬ್ಬ.—ಕೇರಳದ ಗಡಿಗಳಲ್ಲಿ ಕಳ್ಳಸಾಗಾಣಿಕೆ ಆಗತಕ್ಕ ಗಂಧ, ಬೀಟೆ ಮರಗಳ ಬಗ್ಗೆ ಮಾನು ಕೇಳಿಕೊಂಡ ಪ್ರಶ್ನೆಗೆ ಒಟ್ಟು ೨ಳ ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ, ಅದರಿಂದ ಸರ್ಕಾರಕ್ಕೆ ೨೫,೧೭೫ ರೂಪಾಯಿ ಬಂದಿದೆ ಎಂದು ಹೇಳಿದ್ದಾರೆ. ದೊಡ್ಡ ಕಳ್ಳತನ ಮಾಡುವವರನ್ನು ಬಿಟ್ಟು ಸಣ್ಣ ಸಣ್ಣ ಕಳ್ಳತನ ಮಾಡುವವರನ್ನು ಹಿಡಿದಿದ್ದಾರೆ ದೊಡ್ಡ ಆನೆಯನ್ನು ಹಿಡಿಯಿರಿ ಅಂದರೆ ಸಣ್ಣ ಇಲಿಯನ್ನು ಹಿಡಿದಿದ್ದಾರೆ. ದೊಡ್ಡ ಕುಳಗಳನ್ನು ಹಿಡಿಯಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ? ಚಿಕ್ಕ ವಿಷಯಗಳಲ್ಲಿ ಸಿಕ್ಕಿರುವವರನ್ನು ಹಿಡಿದಿದ್ದೀರಿ.

ಶ್ರೀ ಜೆ. ಎಸ್. ಪಾಟೀಲ.—೨ಳ ಪ್ರಕರಣಗಳನ್ನು ಪತ್ತೆ ಹಚ್ಚಿದ್ದೇವೆ. ಕೆಲವೊಂದ ಪ್ರಕರಣಗಳು ಕೋರ್ಟ್‌ನಲ್ಲಿವೆ. ಕಳ್ಳತನ ಮಾಡುವವರು ಕೆಲವರು ಸಿಕ್ಕಿಲ್ಲ. ಕೆಲವು ಕೇಸುಗಳಲ್ಲಿ ನಮ್ಮ ಅಧಿಕಾರಿಗಳು ದಂಡ ಹಾಕಿ ಬಿಟ್ಟಿದ್ದಾರೆ. ಅರಣ್ಯ ಸಿಬ್ಬಂದಿಯವರಿಗೆ ವಾಕಿಟಾಕಿ ಬಂದೂಕುಗಳನ್ನು ಕೊಟ್ಟಿದ್ದೇವೆ. ಸಿಬ್ಬಂದಿಯನ್ನು ಹೆಚ್ಚಿಸಿದ್ದೇವೆ, ಪೋಲೀಸರ ಸಹಾಯವನ್ನು ತೆಗೆದುಕೊಳ್ಳಲಾಗುತ್ತಿದೆ. ಈ ರೀತಿ ವ್ಯವಸ್ಥೆ ಮಾಡಿರುವುದರಿಂದ ಕಳ್ಳತನ ಸ್ವಲ್ಪ ಕಡಿಮೆಯಾಗಿದೆ.

ಶ್ರೀ ಬಿ.ಎಂ. ಇದಿನಬ್ಬ.— ಈಗ ಅರಣ್ಯ ಇಲಾಖೆಯವರು ಮುಷ್ಕರ ಮಾಡಿದರು. ಆ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಳ್ಳಸಾಗಾಣಿಕೆ ಆಗಿದೆಯೆಂದು ಅನೇಕ ರೀತಿಯಲ್ಲಿ ಜನ ಹೇಳುತ್ತಿದ್ದಾರೆ. ಅದು ಮೂತ್ತ ವಲ್ಲ ಸಂಬ್ರಮ್ಯಾಣ ಮುಂತಾದ ಕಾಡುಗಳಲ್ಲಿ ಮರಗಳನ್ನು ನಾಶಮಾಡುತ್ತಿದ್ದಾರೆ. ಅಲ್ಲಿ ಮರವೂ ಇಲ್ಲ, ಬೆಳೆಯೂ ಇಲ್ಲ ಎಂದು ಜನ ಹೇಳುತ್ತಿದ್ದಾರೆ. ಈ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಜೆ. ಎಸ್. ದೇಶ್‌ಮುಂಖ್.—ಮಾನ್ಯ ಅಧ್ಯಕ್ಷರೇ, ಮೊನ್ನೆ ನಮ್ಮ ಸಿಬ್ಬಂದಿಯವರ ಮುಷ್ಕರ ಮಾಡಿದಾಗ ಕೆಲವೊಂದು ಹೆಚ್ಚು ಪೋಲೀಸ್ ಸಿಬ್ಬಂದಿಗೆ ವಹಿಸಿಕೊಟ್ಟಿದ್ದೆವು. ಎಷ್ಟು ಅರಣ್ಯ ನಾಶವಾಗಿದೆ ಎಂದು ತಿಳಿದುಬಂದಿಲ್ಲ. ಅದರ ಬಗೆ ವಿವರಗಳನ್ನು ಬೇಕಾದರೆ ಒದಗಿಸಿ ಕೊಡುತ್ತೇನೆ.

ಸಣ್ಣ ಜಲವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಖಾಸಗಿಯವರಿಗೆ ಕೊಡುವ ಬಗ್ಗೆ

೧೪. ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಕೈಗಾರಿಕಾ ಮಂತ್ರಿ ವಿದ್ಯುಚ್ಛಕ್ತಿ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ಸಣ್ಣ ಜಲವಿದ್ಯುತ್ ಯೋಜನೆಗಳನ್ನು ನಿರ್ಮಾಣ ಮಾಡಲು ಎಷ್ಟು ಜನ ಖಾಸಗಿ ಉದ್ಯಮಿಗಳಿಗೆ ಸಂಸ್ಥೆಗಳಿಗೆ ಪರವಾನಿಗೆ ನೀಡಲಾಗಿದೆ ?

ಆ) ಸದರಿ ಖಾಸಗಿ ಉದ್ಯಮಿಗಳು ಅಥವಾ ಸಂಸ್ಥೆಗಳು ಯಾರು, ಯಾವುವು, ಹಾಗೂ ಅವರಿಗೆ ವಹಿಸಿರುವ ಯೋಜನೆಗಳು ಯಾವುವು ? ಯೋಜನೆಯ ಸಾಮರ್ಥ್ಯ ಹಾಗೂ ಅಂದಾಜು ವೆಚ್ಚವೆಷ್ಟು ?

ಇ) ಸದರಿ ಖಾಸಗಿ ಉದ್ಯಮಿಗಳನ್ನು ಅಥವಾ ಸಂಸ್ಥೆಗಳನ್ನು ಆಯ್ಕೆ ಮಾಡಲು ಅನುಸರಿಸಿದ ನೀತಿ ಹಾಗೂ ಆಧಾರವೇನು ?

ಈ) ಸದರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ನಿಗದಿಗೊಳಿಸಿರುವ ಕಾಲಮಿತಿ ಏನು ? ಹಾಗೂ ಈ ಬಗ್ಗೆ ಈವರೆಗೆ ಆಗಿರುವ ಪ್ರಗತಿಯ ವಿವರಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೮ ಖಾಸಗಿ ಉದ್ಯಮಿಗಳಿಗೆ ಪರವಾನಿಗೆ ನೀಡಿದೆ.

ಆ) ವಿವರಗಳನ್ನು ಪಟ್ಟಿಯಲ್ಲಿ ಕೊಟ್ಟಿದೆ.

ಇ) ಮಿನಿ ಹೈಡಲ್ಸ್ ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿಯವರು ಪಾಲ್ಗೊಳ್ಳಲು ಅವಕಾಶ ಮಾಡಬೇಕೆಂಬುದು ಸರ್ಕಾರದ ನೀತಿಯಾಗಿದೆ. ಈ ೮ ಉದ್ದಿವೆಂದಾರರು ಮುನವಿ ಸಲ್ಲಿಸಿದ್ದರಿಂದ ಅವುಗಳನ್ನು ಮುಂಜೂರು ಮಾಡಲಾಗಿದೆ.

ಈ) ಸರ್ಕಾರಿ ಆದೇಶ ಹೊರಡಿಸಿದ ೧೮ ತಿಂಗಳ ಒಳಗಡೆ ಪರಿಣಾಮಕಾರಿ ಕ್ರಮಗಳನ್ನು ತೆಗೆದು ಕೊಳ್ಳಬೇಕೆಂದು ನಿರ್ದೇಶಿಸಲಾಗಿದೆ.